28/2/20 — KVB
P — PP.

To Report.
Heard from both side.
For orders

28/2

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.
(ಪ್ರತ್ಯೇಕ ಆದೇಶದಂತೆ)

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ ಅಜಿತ್ ಸುರಾನ ಈತನ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ಅರ್ಜಿದಾರನ ವಿರುದ್ಧ ಭಾರತ ದಂಡ ಸಂಹಿತೆ ಕಲಂ 420ರಡಿಯಲ್ಲಿ ದಾಖಲಾದ ಎನ್‌ಸಿಆರ್ ಸಂಖ್ಯೆ 132/2019ಕ್ಕೆ ಸಂಬಂಧಿಸಿದಂತೆ ಪುಲಕೇಶಿನಗರ ಪೊಲೀಸರು ಅರ್ಜಿದಾರನನ್ನು ಒಂದು ವೇಳೆ ಬಂಧಿಸಿದಲ್ಲಿ, ಆತನನ್ನು ಈ ಕೆಳಕಂಡ ಷರತ್ತುಗಳನ್ವಯ ನಿರೀಕ್ಷಣಾ ಜಾಮೀನಿನ ಮೇಲೆ ಬಿಡತಕ್ಕದ್ದು.

1. ಅರ್ಜಿದಾರ 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು

28/2

ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ಪುಲಕೇಶಿನಗರ ಪೊಲೀಸ್ ಠಾಣೆಯ ಠಾಣಾಧಿಕಾರಿಗೆ ತೃಪ್ತಿಯಾಗುವಂತೆ ನೀಡತಕ್ಕದ್ದು,

2. ಅರ್ಜಿದಾರ ಹಾಗೂ ಜಾಮೀನುದಾರ ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ಹಾಜರು ಪಡಿಸತಕ್ಕದ್ದು,

3. ಅರ್ಜಿದಾರ ತನಿಖಾಧಿಕಾರಿಯೊಂದಿಗೆ ತನಿಖೆಗೆ ಸಹಕರಿಸತಕ್ಕದ್ದು,

4. ಅರ್ಜಿದಾರ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿ ಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸಬಾರದು,

5. ಈ ನಿರೀಕ್ಷಣಾ ಜಾಮೀನಿನ ಆದೇಶವು ಈ ದಿನದಿಂದ 6 ತಿಂಗಳವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ.

29/2

*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*

**57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಮೆಯೋಹಾಲ್ ಘಟಕ, ಬೆಂಗಳೂರು**

**(58ನೇ ನಗರ ಸಿವಿಲ್ ನ್ಯಾಯಾಂಗಣ)**

*ದಿನಾಂಕಃ 29ನೇ ಮಾಹೆ ಫೆಬ್ರವರಿ, 2020*

-ಃ ಉಪಸ್ಥಿತರು ಃ-

*ಶ್ರೀ ಬಾಬಾಸಾಹೇಬ್ ಎಲ್. ಜಿನರಾಳ್ಕರ್, ಎಂ.ಎ., ಎಲ್ಎಲ್.ಎಂ.,*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು*

**ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ 25169/2020**

ಅರ್ಜಿದಾರ ಃ ಅಜಿತ್ ಸುರಾನ, ಸುಮಾರು 34 ವರ್ಷ,
ವಾಸಃ ನಂಬರ್ 168, ರಾಮ ದೇವಸ್ಥಾನದ ಓಣಿ,
ಕಾಕ್ಸ್‌ಟೌನ್, ಜೀವನಹಳ್ಳಿ, ಬೆಂಗಳೂರು ಉತ್ತರ,
ಫ್ರೇಜರ್‌ಟೌನ್, ಬೆಂಗಳೂರು -05.

(ಪರವಾಗಿ ಶ್ರೀ ಕೆ.ವೆಂಕಟರಮಣ (ಬಾಬು), ವಕೀಲರು)

- ವಿರುದ್ಧ -

ಎದುರುದಾರರುಃ ರಾಜ್ಯದ ಪರವಾಗಿ ಪುಲಕೇಶಿನಗರ ಪೊಲೀಸ್ ಠಾಣೆ,
ಬೆಂಗಳೂರು ನಗರ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ

ತನ್ನ ವಿರುದ್ಧ ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ಭಾರತ ದಂಡ ಸಂಹಿತೆ ಕಲಂ 420ರಡಿಯಲ್ಲಿ ದಾಖಲಾದ ಎನ್‌ಸಿಆರ್ ಸಂಖ್ಯೆ 132/2019ರ ಪ್ರಕರಣಕ್ಕೆ [illegible]

**57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಮೆಯೋಹಾಲ್ ಘಟಕ, ಬೆಂಗಳೂರು**

**(58ನೇ ನಗರ ಸಿವಿಲ್ ನ್ಯಾಯಾಂಗಣ)**

ದಿನಾಂಕ: 29ನೇ ಮಾಹೆ ಫೆಬ್ರವರಿ, 2020

-: ಉಪಸ್ಥಿತರು :-

ಶ್ರೀ ಬಾಬಾಸಾಹೇಬ್ ಎಲ್. ಜಿನರಾಳ್ಕರ್, ಎಂ.ಎ., ಎಲ್‌ಎಲ್.ಎಂ.,
57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್ ಘಟಕ, ಬೆಂಗಳೂರು

**<u>ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ 25169/2020</u>**

ಅರ್ಜಿದಾರ : ಅಜಿತ್ ಸುರಾನ, ಸುಮಾರು 34 ವರ್ಷ,
ವಾಸ: ನಂಬರ್ 168, ರಾಮ ದೇವಸ್ಥಾನದ ಓಣಿ,
ಕಾಕ್ಸ್‌ಟೌನ್, ಜೀವನಹಳ್ಳಿ, ಬೆಂಗಳೂರು ಉತ್ತರ,
ಫ್ರೇಜರ್‌ಟೌನ್, ಬೆಂಗಳೂರು -05.

(ಪರವಾಗಿ ಶ್ರೀ ಕೆ.ವೆಂಕಟರಮಣ (ಬಾಬು), ವಕೀಲರು)

- ವಿರುದ್ಧ -

ಎದುರುದಾರರು: ರಾಜ್ಯದ ಪರವಾಗಿ ಪುಲಕೇಶಿನಗರ ಪೊಲೀಸ್ ಠಾಣೆ,
ಬೆಂಗಳೂರು ನಗರ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಸಲ್ಲಿಸಿದ</u>
<u>ಅರ್ಜಿಯ ಮೇಲಿನ ಆದೇಶ</u>

ತನ್ನ ವಿರುದ್ಧ ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ಭಾರತ ದಂಡ ಸಂಹಿತೆ ಕಲಂ 420ರಡಿಯಲ್ಲಿ ದಾಖಲಾದ ಎನ್‌ಸಿಆರ್ ಸಂಖ್ಯೆ 132/2019ರ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿರ್ಯಾದಿ ಪೊಲೀಸರು ತನ್ನನ್ನು ದಸ್ತಗಿರಿ ಮಾಡಬಹುದೆಂಬ

29/2

ಅನುಮಾನದ ಮೇಲೆ ಆ ರೀತಿ ಬಂಧಿಸದಂತೆ ತನಗೆ ನಿರೀಕ್ಷಣಾ ಜಾಮೀನು ನೀಡಬೇಕೆಂಬ ಆದೇಶ ಕೋರಿ, ಅರ್ಜಿದಾರ ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಈ ಅರ್ಜಿಯನ್ನು ಸಲ್ಲಿಸಿದ್ದಾನೆ.

2. ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ:-

ಬೆಂಗಳೂರಿನ ಫ್ರೇಜರ್‌ಟೌನ್‌ನ ವೀಲರ್ಸ್ ರಸ್ತೆಯ ನಂಬರ್ 8/4ರಲ್ಲಿರುವ ಸುರಾನ ಜ್ಯುವೆಲರ್ಸ್‌ಗೂ ತನಗೂ ಯಾವುದೇ ಸಂಬಂಧ ಇರುವುದಿಲ್ಲವೆಂದೂ, ಶ್ರೀಮತಿ ವಸಂತ ಸುರಾನರವರು ಸದರಿ ಜ್ಯುವೆಲರ್ಸ್‌ನ ಮಾಲೀಕರಾಗಿರುತ್ತಾರೆಂದೂ, ತಾನು ಪಿರ್ಯಾದಿದಾರರನ್ನು ಯಾವುದೇ ರೀತಿಯಲ್ಲಿ ವಂಚಿಸಿರುವುದಿಲ್ಲವೆಂದೂ, ಪೊಲೀಸರು ತನ್ನನ್ನು ದಸ್ತಗಿರಿ ಮಾಡಲು ನೋಡುತ್ತಿದ್ದಾರೆಂದೂ ಹಾಗೂ ತನ್ನ ವಿರುದ್ಧ ಭಾರತ ದಂಡ ಸಂಹಿತೆ ಕಲಂ 420ರಡಿ ಪ್ರಕರಣ ದಾಖಲು ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆಂದೂ, ಆ ರೀತಿ ದಸ್ತಗಿರಿ ಮಾಡಿದಲ್ಲಿ ತನಗೆ ತುಂಬಲಾರದ ತೊಂದರೆಯಾಗುತ್ತದೆ ಎಂದೂ, ಆರೋಪಿಸಿದಂತಹ ಅಪರಾಧವು ಕಡ್ಡಾಯವಾಗಿ ಮರಣದಂಡನೆ ಅಥವಾ ಜೀವಾವಧಿಶಿಕ್ಷೆ ವಿಧಿಸುವಂತಹ ಅಪರಾಧವಲ್ಲವೆಂದೂ, ತಾನು ಗೌರವಾನ್ವಿತ ಕುಟುಂಬದಿಂದ ಬಂದವನಾಗಿದ್ದು, ಬೆಂಗಳೂರಿನ ಖಾಯಂ ನಿವಾಸಿಯಾಗಿರುವ ತನಗೆ ಕುಟುಂಬ ನಿರ್ವಹಣೆಯ ಜವಾಬ್ದಾರಿ ಇರುವುದಾಗಿಯೂ, ತನಿಖೆಗೆ ಸಹಕರಿಸಲು ಹಾಗೂ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಹಾಗೂ ಸೂಕ್ತ ಜಾಮೀನುದಾರರನ್ನು ನೀಡಲು ತಾನು ಸಿದ್ದನಿದ್ದೇನೆಂದೂ ಹೇಳಿ, ತನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಅರ್ಜಿದಾರನು ಕೋರಿಕೊಂಡಿದ್ದಾನೆ.

3. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ, ಅರ್ಜಿದಾರ ಅಮಾಯಕರನ್ನು ನಂಬಿಸಿ ಮೋಸ ಮಾಡುವ ಪ್ರವೃತ್ತಿಯುಳ್ಳವನಾಗಿರುತ್ತಾನೆಂದೂ, ಇದೇ ರೀತಿ ಹಲವಾರು ಜನರಿಗೆ ಮೋಸ ಮಾಡಿರುವುದಾಗಿ ತಿಳಿದು ಬಂದಿದ್ದು, ಆ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಬೇಕಾಗಿರುತ್ತದೆ ಎಂದೂ, ಅರ್ಜಿದಾರನಿಗೆ ನಿರೀಕ್ಷಣ ಜಾಮೀನು ನೀಡಿದರೆ ಪಿರ್ಯಾದಿದಾರರಿಗೆ ಸೇರಬೇಕಾದ ಒಡವೆ ಮತ್ತು ಹಣವನ್ನು ಕೊಡದೆ ಬೆದರಿಕೆ ಹಾಕುವ ಸಂಭವವಿರುತ್ತದೆ ಎಂದೂ, ಅರ್ಜಿದಾರನನ್ನು ಜಾಮೀನಿನ ಮೇಲೆ ಬಿಟ್ಟಲ್ಲಿ ಆತ ಅಭಿಯೋಜನಾ ಪರ ಸಾಕ್ಷ್ಯಗಳನ್ನು ನಾಶಪಡಿಸುವ ಸಾಧ್ಯತೆ ಇದೆ ಎಂದು ಹೇಳಿ, ಆತನ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

4. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯತರರ ವಾದ ವಿವಾದವನ್ನು ಆಲಿಸಲಾಯಿತು.

5. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೇಃ-

1) ಅರ್ಜಿದಾರ ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆಯಲು ಅರ್ಹನಿದ್ದಾನೆಯೇ?

2) ಏನು ಆದೇಶ?

6. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

ಅಂಶ ಒಂದುಃ ಸಕಾರಾತ್ಮಕವಾಗಿ,

ಅಂಶ ಎರಡುಃ ಅಂತಿಮ ಆದೇಶದಂತೆ, ಈ ಕೆಳಕಂಡಂತೆಃ

29/2

## ಕಾ ರ ಣ ಗ ಳು:

7. **ಅಂಶ ಒಂದು:** ಅರ್ಜಿದಾರ, ತಾನು ಪಿರ್ಯಾದಿದಾರರಿಗೆ ಯಾವುದೇ ರೀತಿಯಲ್ಲಿಯೂ ವಂಚನೆ ಮಾಡಿರುವುದಿಲ್ಲವೆಂದೂ, ಪಿರ್ಯಾದಿದಾರರು ತನ್ನ ವಿರುದ್ಧ ಸುಳ್ಳು ಆಪಾದನೆಯನ್ನು ಮಾಡಿ, ದೂರನ್ನು ನೀಡಿರುತ್ತಾರೆ ಎಂದು ತನ್ನ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾನೆ. ಅರ್ಜಿದಾರನ ಪರ ವಕೀಲರು ಅರ್ಜಿದಾರ ಪಿರ್ಯಾದಿದಾರರು ಆರೋಪಿಸಿದಂತಹ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲವೆಂದೂ, ಆ ಕಾರಣ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕೆಂದು ವಾದಿಸಿದ್ದಾರೆ. ಅರ್ಜಿದಾರ ಪಿರ್ಯಾದಿದಾರರನ್ನು ವಂಚಿಸಿದ್ದು ಅಲ್ಲದೇ ಇತರ ಜನರನ್ನು ವಂಚಿಸಿರುವುದರಿಂದ, ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಾರದು ಎಂದು ಸರ್ಕಾರಿ ಅಭಿಯೋಜಕರು ವಾದಿಸಿದ್ದಾರೆ.

8. ಪಿರ್ಯಾದಿದಾರರಾದ ಶ್ರೀಮತಿ ಶೋಭ ಚಂದ್ರಶೇಖರ್‌ರವರು 2012 ರಿಂದ 2014ರವರೆಗೆ ಮಗಳ ಮದುವೆಗಾಗಿ ಸುರಾನ ಜ್ಯೂವೆಲರಿ ಮಾಲೀಕರಾದ ಅಜಿತ್ ಸುರಾನ ಮತ್ತು ಸಾಗರ್ ಸುರಾನರವರಲ್ಲಿ ಆಕೆ ನಿವೃತ್ತಿ ಆಗಿದ್ದ ಹಣ ಮತ್ತು ಉಳಿತಾಯ ಮಾಡಿ ಉಳಿಸಿದ ಹಣ ಹಾಗೂ ಆಕೆಯ ತಂದೆಯ ಹಣ ಎಲ್ಲವನ್ನು ತನ್ನ ಮಗಳ ಮದುವೆ ಮಾಡಬೇಕೆಂದು ತೀರ್ಮಾನಿಸಿ, ಸದರಿ ಸುರಾನ ಜ್ಯೂವೆಲರಿ ಮಾಲೀಕರಾದ ಅಜಿತ್ ಸುರಾನ ಮತ್ತು ಸಾಗರ್ ಸುರಾನರವರಲ್ಲಿ ಹಂತ ಹಂತವಾಗಿ ಒಡವೆಗಳನ್ನು ಅರ್ಡರ್ ಮಾಡಿ ಒಟ್ಟು 39,65,314/-ರೂ ಹಣವನ್ನು ನೀಡಿದ್ದು, ಅಜಿತ್ ಸುರಾನ ಹಾಗೂ ಸಾಗರ್ ಸುರಾನ್ ರವರನ್ನು ಸದರಿ ಹಣ ಹಾಗೂ ಒಡವೆಗಳನ್ನು ಕೇಳಲಾಗಿ ಇಬ್ಬರೂ ಸೇರಿ ಬೇರೆಯವರಿಂದ ತಮಗೆ ಹಣ

29/2

ಬರಬೇಕಾಗಿರುತ್ತದೆ, ಬಂದ ತಕ್ಷಣ ನಿಮಗೆ ಸೇರಿದ ಚಿನ್ನದ ಒಡವೆಗಳನ್ನು ಮತ್ತು ಹಣವನ್ನು ನೀಡುತ್ತೇವೆಂದು ಹೇಳಿ ಸತಾಯಿಸುತ್ತಿದ್ದಾರೆ ಎಂದು ಕೊಟ್ಟ ದೂರಿನನ್ವಯ ಎನ್.ಸಿ.ಆರ್. ಸಂಖ್ಯೆ 132/2019ರಂತೆ ನೋಂದಾಯಿಸಲಾಗಿದೆ ಎನ್ನುವುದು ಸದರಿ ದೂರಿನ ಪ್ರತಿಯಿಂದ ವ್ಯಕ್ತವಾಗುತ್ತದೆ.

9. ಪಿರ್ಯಾದಿದಾರರ ದೂರನ್ನು ಗಮನಿಸಿದಾಗ ಅರ್ಜಿದಾರನ ಮತ್ತು ಪಿರ್ಯಾದಿದಾರರ ನಡುವಿನ ಹಣಕಾಸಿನ ವ್ಯವಹಾರ 16-04-2013 ರಿಂದ 16-06-2014ರ ನಡುವೆ ನಡೆದಿದ್ದು, ಪಿರ್ಯಾದಿದಾರರು ಯಾವ ಕಾರಣದಿಂದ ಸುಮಾರು 5 ವರ್ಷಗಳ ಕಾಲ ಆ ಬಗ್ಗೆ ದೂರನ್ನು ನೀಡದೆ ಇರಲು ಕಾರಣವೇನು ಎಂಬ ಬಗ್ಗೆ ಯಾವುದೇ ಮಾಹಿತಿ ಪಿರ್ಯಾದಿದಾರರ ದೂರಿನಿಂದ ವ್ಯಕ್ತವಾಗುತ್ತಿಲ್ಲ ಹಾಗೂ ಪಿರ್ಯಾದಿದಾರರು ಹೇಳುವಂತೆ ಹಣವನ್ನು ಈ ಅರ್ಜಿದಾರನಿಗೆ ನೀಡಲಾಗಿದೆ ಎಂಬ ಬಗ್ಗೆ ಸಹಾ ಯಾವುದೇ ಮಾಹಿತಿ ವ್ಯಕ್ತವಾಗುತ್ತಿಲ್ಲ. ಅರ್ಜಿದಾರ ತಾನು ಪಿರ್ಯಾದಿದಾರರಿಂದ ಯಾವುದೇ ಹಣ ಪಡೆದಿಲ್ಲ, ತನಗೂ ಸದರಿ ಸುರಾನ ಜ್ಯೂವೆಲರ್ಸ್‌ಗೂ ಯಾವುದೇ ಸಂಬಂಧ ಇಲ್ಲ, ಪಿರ್ಯಾದಿದಾರರು ತನ್ನ ವಿರುದ್ಧ ಸುಳ್ಳು ದೂರನ್ನು ನೀಡಿ, ತನ್ನನ್ನು ದಸ್ತಗಿರಿ ಮಾಡಿಸಲು ನೋಡುತ್ತಿದ್ದಾರೆ ಎಂದು ಹೇಳಿದ್ದು ಹಾಗೂ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಬಹುದೆಂಬ ಕಾರಣಕ್ಕೆ ಆತ ನಿರೀಕ್ಷಣಾ ಜಾಮೀನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುವುದು ಸ್ಪಷ್ಟವಾಗಿದೆ. ಪಿರ್ಯಾದಿದಾರರು ತನ್ನನ್ನು ದಸ್ತಗಿರಿ ಮಾಡಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅರ್ಜಿದಾರ ಹೇಳಿರುವುದನ್ನು ಗಮನಿಸಿದಾಗ ಅರ್ಜಿದಾರನಿಗೆ ನಿಸ್ಸಂಶಯವಾಗಿ ಭಯವಿದ್ದೇ ಇರುತ್ತದೆ ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ, ಮೇಲಾಗಿ, ಆರೋಪಿಸಿದಂತಹ ಅಪರಾಧವು ಕಡ್ಡಾಯವಾಗಿ

29/2

ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧವಲ್ಲ ಹಾಗೂ ಕೆಳನ್ಯಾಯಾಲಯದಲ್ಲಿ ವಿಚಾರಣೆಯಾಗುವಂತಹ ಅಪರಾಧವಾಗಿದ್ದು, ಸರ್ಕಾರಿ ಅಭಿಯೋಜಕರು ವ್ಯಕ್ತ ಪಡಿಸಿರುವ ಆತಂಕಗಳನ್ನು ಸೂಕ್ತ ಷರತ್ತುಗಳನ್ನು ವಿಧಿಸುವುದರೊಂದಿಗೆ ಅರ್ಜಿದಾರರಿಗೆ ನಿರೀಕ್ಷಣಾ ಜಾಮೀನು ನೀಡಬಹುದಾಗಿದೆ ಎಂಬ ಅಭಿಪ್ರಾಯಕ್ಕೆ ಬಂದು ಮೇಲಿನ ಅಂಶ ಒಂದನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. **ಅಂಶ ಎರಡುಃ** ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ ಅಜಿತ್ ಸುರಾನ ಈತನ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ಅರ್ಜಿದಾರನ ವಿರುದ್ಧ ಭಾರತ ದಂಡ ಸಂಹಿತೆ ಕಲಂ 420ರಡಿಯಲ್ಲಿ ದಾಖಲಾದ ಎನ್‌ಸಿಆರ್ ಸಂಖ್ಯೆ 132/2019ಕ್ಕೆ ಸಂಬಂಧಿಸಿದಂತೆ ಪುಲಕೇಶಿನಗರ ಪೊಲೀಸರು ಅರ್ಜಿದಾರನನ್ನು ಒಂದು ವೇಳೆ ಬಂಧಿಸಿದಲ್ಲಿ, ಆತನನ್ನು ಈ ಕೆಳಕಂಡ ಷರತ್ತುಗಳನ್ವಯ ನಿರೀಕ್ಷಣಾ ಜಾಮೀನಿನ ಮೇಲೆ ಬಿಡತಕ್ಕದ್ದು.

1. ಅರ್ಜಿದಾರ 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ

2/12

ಒಬ್ಬ ಜಾಮೀನುದಾರನನ್ನು ಪುಲಕೇಶಿನಗರ ಪೊಲೀಸ್ ಠಾಣೆಯ ಠಾಣಾಧಿಕಾರಿಗೆ ತೃಪ್ತಿಯಾಗುವಂತೆ ನೀಡತಕ್ಕದ್ದು,

2. ಅರ್ಜಿದಾರ ಹಾಗೂ ಜಾಮೀನುದಾರ ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ಹಾಜರು ಪಡಿಸತಕ್ಕದ್ದು,
3. ಅರ್ಜಿದಾರ ತನಿಖಾಧಿಕಾರಿಯೊಂದಿಗೆ ತನಿಖೆಗೆ ಸಹಕರಿಸತಕ್ಕದ್ದು,
4. ಅರ್ಜಿದಾರ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸಬಾರದು,
5. ಈ ನಿರೀಕ್ಷಣಾ ಜಾಮೀನಿನ ಆದೇಶವು ಈ ದಿನದಿಂದ 6 ತಿಂಗಳವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ.

*(ಈ ಆದೇಶವನ್ನು ತೀರ್ಪು ಬರಹಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ 29ನೇ ಮಾಹೆ ಫೆಬ್ರವರಿ, 2020 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ)*

29/2

(ಬಾಬಾಸಾಹೇಬ್ ಎಲ್. ಜಿನರಾಳ್ಕರ್)
57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋ ಹಾಲ್ ಘಟಕ, ಬೆಂಗಳೂರು ನಗರ.